ದಿಃ 09-10-2023 ರಂದು ಪ್ರಾಸಾ 3 ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ

3). ನನ್ನ ಹಾಗೂ ಪ್ರಾಸಾ 2 ರ ಮದುವೆಯನ್ನು ಫಕ್ಕಿರೇಶ್ವರ ದೇವಸ್ಥಾನದಲ್ಲಿ ಸಾಮೂಹಿಕ ಮದುವೆಯ ಸಮಾರಂಭದಲ್ಲಿ ನೆರವೇರಿಸಬೇಕೆಂದು ನಮ್ಮ ತಂದೆ-ತಾಯಿಯವರು ದೇವಸ್ಥಾನದ ಕಮೀಟಿಯವರಿಗೆ ಹಣ ತುಂಬಿ ರಸೀದಿ ಪಡೆದುಕೊಂಡಿದ್ದೆವು. ಆ ರಸೀದಿಯನ್ನು ಪೊಲೀಸರಿಗೆ ನಾವು ಕೊಟ್ಟಿರಲಿಲ್ಲ. ಸಾಮೂಹಿಕ ಮದುವೆಯಲ್ಲಿ ಮದುವೆಯಾಗಬೇಕಾದರೆ ನಮಗೆ ಮದುವೆಯಾಗಿರುವುದಿಲ್ಲ ಎಂದು ಪಂಚಾಯತಿಯಿಂದ ಪ್ರಮಾಣಪತ್ರವನ್ನು ಪಡೆದು ದೇವಸ್ಥಾನದ ಕಮೀಟಿಯವರಿಗೆ ಕೊಟ್ಟಿರಲಿಲ್ಲ. ಅಂತಹ ಸಾಮೂಹಿಕ ಮದುವೆಗಳಿಗೆ ನೋಂದಣಿ ಮಾಡಿಸಿದವರು ರೂ.501/- ಅಥವಾ ರೂ.1001/- ಈ ರೀತಿ ದೇಣಿಗೆ ನೀಡಿ ರಸೀದಿ ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಆ ರೀತಿ ನಮ್ಮ ಮನೆಯವರು ದೇಣಿಗೆ ನೀಡಿ ಪಡೆದ ರಸೀದಿಯನ್ನು ಪೊಲೀಸರಿಗೆ ಕೊಟ್ಟಿರಲಿಲ್ಲ.

4). ಸವರ್ಣೀಯರ ಜೊತೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವುದಿಲ್ಲ ನಿಮ್ಮ ಕಾಲೋನಿಯಲ್ಲಿರುವ ಅಂಬೇಡ್ಕರ ಭವನದಲ್ಲಿ ವಿವಾಹ ಮಾಡಿಕೊಳ್ಳಿ ಎಂದು ಆರೋಪಿಗಳು ನಮಗೆ ಹೇಳಿರಲಿಲ್ಲ ಆದರೆ ತಿಗರಿ ಗ್ರಾಮದಲ್ಲಿ ಹೇಳಿದ್ದರು. ಅವರು ನಿಖರವಾಗಿ ಆ ಮಾತುಗಳನ್ನು ಯಾರಿಗೆ ಹೇಳಿದರೆಂದು ಗೊತ್ತಿಲ್ಲ, ಆ ಸಮಯ ನಾನು ಆ ಜಾಗದಲ್ಲಿರಲಿಲ್ಲ. ಸಾಮಾನ್ಯವಾಗಿ ನಮ್ಮ ಜನಾಂಗದವರು ಸಾರೆಮ್ಮ ದೇವಸ್ಥಾನದ ಬಳಿ ಇರುವ ಅಂಬೇಡ್ಕರ ಭವನದಲ್ಲಿ ಮದುವೆ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ಆರೋಪಿಗಳು ಅವಾಚ್ಯ ಶಬ್ದಗಳಿಂದ ಬೈಯ್ದು ಜೀವ ಬೆದರಿಕೆ ಹಾಕಿರುವುದನ್ನು ನಾನು ನೋಡಿರಲಿಲ್ಲ. ಆಗ ನಾವು ಸಮುದಾಯ ಭವನದ ಒಳಗೆ ಇದ್ದೆವು ಎಂದು ಸಾಕ್ಷಿದಾರರು ಮುಂದುವರಿದು ನುಡಿದಿರುತ್ತಾರೆ. ಫಕ್ಕೀರೇಶ್ವರ ದೇವಸ್ಥಾನದ ಸದಸ್ಯರು ಆ ಸಮಯ ಯಾರಿದ್ದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆಯಲ್ಲಿ ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿರದೇ ಇದ್ದರೂ ಊರಿನ ಹಿರಿಯರ ಹಾಗೂ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಫಕ್ಕೀರೇಶ್ವರ ಜಾತ್ರೆ ಸಮಯ ಆರೋಪಿಗಳು ನಮ್ಮ ಜಾತಿ ನಿಂದನೆ ಮಾಡಿರಲಿಲ್ಲ ಮತ್ತು ಜೀವ ಬೆದರಿಕೆ ಹಾಕಿರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಸಿ ಚಂದ್ರಶೇಖರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ